## ಪದಬಂಧ



### ಎಡದಿಂದ ಬಲಕ್ಕೆ

1. ಪ್ರಚಾರ ಬಯಸಿ ಮಾಡಿದ್ದು ಈ ಧಾರ್ಮಿಕ ಉಪನ್ಯಾಸ 4
3. ಕಾಲಹರಣ ಮಾಡಲೆಂದು ವಾಗ್ವಾದದ ಜಗಳ ಆರಂಭಿಸಿದರೇ? 3
4. ಋಣವನ್ನು ತೀರಿಸಲೆಂದು ಆತ ಪೂಜಿಸಿದ್ದು ಜಲದೇವತೆಯನ್ನು ಹೌದೇ? 4
6. ಈ ಮನೆಯನ್ನು ಕೊಳ್ಳುವುದರಲ್ಲಿ ಆತನಿಗೆ ಏನೋ ಸಂಶಯ 4
7. ವಿಚಿತ್ರ ಕ್ರಮಗಳನ್ನೆಲ್ಲ ತುಳಿದದ್ದು ಬೃಹದಾಕಾರದ ವಿಷ್ಣುವಿನ ಅವತಾರ 4
9. ಹೊಸದಾದ ಕೆರೆ ನಿರ್ಮಿಸಲು ಎಲ್ಲ ಜೊತೆಗೂಡುವಿಕೆ ಬೇಕು 4
12. ಗಾಢ ಅಧ್ಯಯನ ಮಾಡಿದ ನಂತರವಷ್ಟೇ ಬೋಧನಾ ಕಾರ್ಯ 4
14. ಸಂಬಳವಿಲ್ಲದ ಕೆಲಸ; ಅದಕ್ಕೇ ಕಿಂಚಿತ್ತೂ ಕಷ್ಟ ಇಲ್ಲ 3
15. ಭಾರೀ ತುತ್ತೂರಿಯ ಸದ್ದು ಕೇಳಿಸಿದೊಡನೆ ಗಡಗಡ ಕಂಪನ 3
16. ಶಂಕರನ ಸೇವಾ ಕಾರ್ಯ ವಿಜಯಶಾಲಿಯಾದೀತು 4

### ಮೇಲಿನಿಂದ ಕೆಳಕ್ಕೆ

1. ಇದು ಹಾಸ್ಯದ ಪರಿ ಅಲ್ಲ; ಬರೀ ವಿಡಂಬನೆ 4
2. ಹೆಸರಿನಲ್ಲಿ ರಾತ್ರಿ ಇದ್ದರೂ ಒಂಬತ್ತು ದಿನ ನಡೆವ ಹಬ್ಬ 4
3. ಮುಖ್ಯವಾದದ್ದನ್ನು ಪ್ರದರ್ಶಿಸಲೆಂದೇ ಈ ಅರ್ಧವೃತ್ತಾಕಾರದ ರಚನೆ 3
5. ಸಂಕ್ರಮಣದ ಮುನ್ನಡೆಯೇ ತಲೆಕೆಳಗಾಯಿತೇ? 3
6. ಅವನ ಸಾಹಸದಲ್ಲಿ ಕಿಂಚಿತ್ತೂ ಶ್ರಮವಿಲ್ಲ 4
8. ಆ ಮಹೋದಯನ ಬಳಿ ಇರುವ 'ರೀ ಸಂಪತ್ತು' ಏನು? 4
10. ಹರಸಾಹಸವಾದರೂ ಸರಿ, ಗೆದ್ದು ಬಾರೆಂದು ಆಶೀರ್ವದಿಸು 3
11. ಆ ಮಹಾರಾಯನ ಬಣಕ್ಕೆ ಸದಾ ಯುದ್ಧದ್ದೇ ಹೆದರಿಕೆ 4
12. ಅಂತರಗಳನ್ನೆಲ್ಲ ಪರಿಹರಿಸಿದ ತರುವಾಯ ಹೇಗೆ? 4
13. ದಪ್ಪವಿರಲಿಲ್ಲವೆಂದು ಹೀಗೆ ಹಲವು ಹಾಳೆ ಹಾಳೆ 3

### 31-08-2023 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಂಗ್ರಾಮ 3. ಕಲಶ 4. ನಕಾರ 6. ಯವ್ವನ 7. ಕೆರಳಿಸು 9. ಆನೆಬಲ 11. ನಟವರ 13. ಜನಬಲ 15. ಹುಡುಕು 17. ತಳಿರು 18. ಸಿಡುಕು 19. ಪುನೀತ

**ಮೇಲಿನಿಂದ ಕೆಳಕ್ಕೆ**

1. ಸಹಾಯ 2. ಮನನ 3. ಕದಳಿ 5. ರವಾನೆ 7. ಕೆಟ್ಟತನ 8. ಸುಧಾಕರ 9. ಆಶ್ವಯುಜ 10. ಲಗ್ನಕಾಲ 12. ವರಾತ 14. ನಸುಕು 15. ಹುರುಪು 16. ಕುಸಿತ

ಪ್ರಶ್ನಾಂಕಣ

# ದಿ ಓಷನ್ ಕ್ಲೀನಪ್: ಏನು ಸಾಧನೆ?

ದಿ ಓಷನ್ ಕ್ಲೀನಪ್ (The Ocean Cleanup), ಅದೊಂದು ಖಾಸಗಿ ಪರಿಸರ ಸೇವಾ ಸಂಸ್ಥೆ. ಅದರ ಕೇಂದ್ರ ಕಚೇರಿ ನೆದರ್ಲೆಂಡ್ ದೇಶದಲ್ಲಿದೆ. ಹೆಸರೇ ಸೂಚಿಸುವಂತೆ ಧರೆಯ ಕಡಲಿನಾವಾರವನ್ನು ಸ್ವಚ್ಛಗೊಳಿಸುವುದೇ ಅದರ ಮೂಲ ಉದ್ದೇಶ. ಅದರಲ್ಲೂ, ಸಾಗರಾವಾರದಲ್ಲಿ ಈವರೆಗಾಗಲೇ ಸಂಗ್ರಹವಾಗಿರುವ ಪ್ಲಾಸ್ಟಿಕ್ ಕಸವನ್ನೆಲ್ಲ ತೆಗೆದುಹಾಕುವುದು ಮತ್ತು ವಿವಿಧ ಮೂಲಗಳಿಂದ ಸಾಗರಕ್ಕೆ ಪ್ಲಾಸ್ಟಿಕ್ ತ್ಯಾಜ್ಯಗಳು ಬಂದು ಸೇರುವುದನ್ನು ಶಾಶ್ವತವಾಗಿ ತಡೆಹಿಡಿಯುವುದು ಈ ಸಂಸ್ಥೆಯ ಧ್ಯೇಯ.

ಸ್ಪಷ್ಟವಾಗಿಯೇ ಇದೊಂದು ಬಹು ದುಸ್ತರ ಯೋಜನೆ. ಏಕೆಂದರೆ ಪ್ರಪಂಚದ ಸಾಗರಾವಾರದಲ್ಲಿ ಈವರೆಗಾಗಲೇ ಸುಮಾರು 200 ದಶಲಕ್ಷ ಟನ್‌ಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯಗಳು ಸಂಗ್ರಹವಾಗಿವೆ. ಜೊತೆಗೆ ಪ್ರತಿವರ್ಷ 14 ದಶಲಕ್ಷ ಟನ್‌ಗಳಷ್ಟು ಹೊಸ ಪ್ಲಾಸ್ಟಿಕ್ ಕಸ ಕಡಲನ್ನು ಸೇರುತ್ತಿದೆ. ಕಡಲ ನೀರಲ್ಲಿ ತೇಲುತ್ತಿರುವ ಚಿಕ್ಕ ಮತ್ತು ದೊಡ್ಡ ಪ್ಲಾಸ್ಟಿಕ್ ಚೂರುಗಳ ಸಂಖ್ಯೆ 5.25 ಲಕ್ಷ ಕೋಟಿ (ಚಿತ್ರ 1 ಮತ್ತು 2) ಹಾಗೂ ಅವುಗಳ ಜೊತೆಗೇ ತೇಲಾಡುತ್ತಿರುವ ಸೂಕ್ಷ್ಮ ಪ್ಲಾಸ್ಟಿಕ್ ಕಣಗಳ (ಮೈಕ್ರೋ ಪ್ಲಾಸ್ಟಿಕ್) ಸಂಖ್ಯೆ 3.58 ಲಕ್ಷ ಕೋಟಿಗೂ ಅಧಿಕ ಇದೆ.

ವಿಶೇಷ ಏನೆಂದರೆ, ಸಾಗರ ಪ್ರವಾಹಗಳ ಚಲನವಲನಗಳಿಂದಾಗಿ ಕಡಲಿನಲ್ಲಿ ತೇಲುತ್ತಲಿರುವ ಪ್ಲಾಸ್ಟಿಕ್ ಕಸದ ಒಂದು ಪ್ರಧಾನ ಭಾಗ ಉತ್ತರ ಪೆಸಿಫಿಕ್ ಸಾಗರದಲ್ಲಿ, 1.6 ದಶಲಕ್ಷ ಚದರ ಕಿಲೋಮೀಟರ್ ವೈಶಾಲ್ಯದ ಒಂದು ನಿರ್ದಿಷ್ಟ ಪ್ರದೇಶದಲ್ಲಿ (ಚಿತ್ರ 3 ಭೂಪಟದಲ್ಲಿ ಬಾಣದ ಗುರುತುಗಳು ಸೂಚಿಸುತ್ತಿರುವ ಪ್ರದೇಶ) ತಿಪ್ಪೆರಾಶಿಯಂತೆ ಒಟ್ಟುಗೂಡಿ ನಿಂತಿದೆ. (ನೋಡಿ: ದಿ ಗ್ರೇಟ್ ಪೆಸಿಫಿಕ್ ಗಾರ್ಬೇಜ್ ಪ್ಯಾಚ್‌ಅದೇನು?: ಪ್ರಶ್ನಾಂಕಣ: ಸುಧಾ 25.04.2019)




ದಿ ಓಷನ್ ಕ್ಲೀನಪ್ ಸಂಸ್ಥೆ ಕಡಲನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ತನ್ನ ಅಭೂತಪೂರ್ವ ಮಹಾನ್ ಕಾರ್ಯಕ್ರಮವನ್ನು 'ದಿ ಗ್ರೇಟ್ ಪೆಸಿಫಿಕ್ ಗಾರ್ಬೇಜ್ ಪ್ಯಾಚ್'ನಿಂದಲೇ ಆರಂಭಿಸಿದೆ. ನಾನಾ ತಾಂತ್ರಿಕ ಪ್ರಯೋಗಗಳ ನಂತರ ತನ್ನ ಪ್ರಥಮ ಪ್ರಯತ್ನದಲ್ಲಿ ಮೊದಲ ಯಶಸ್ಸನ್ನು ಕಂಡಿದೆ. ವಿಶೇಷ ಹಡಗುಗಳನ್ನು ಬಳಸಿ, ವಿಶಿಷ್ಟವಾಗಿ ರೂಪಿಸಿದ 'ಗುಡಿಸು ಬಲೆ'ಗಳನ್ನು (ಸ್ವೀಪಿಂಗ್ ನೆಟ್ಸ್) ಬಳಸಿ ಪ್ಲಾಸ್ಟಿಕ್ ಕಸವನ್ನು ಒಟ್ಟುಗೂಡಿಸಿ, ಹಡಗುಗಳಿಗೆ ಏರಿಸಿ, ನೆಲಕ್ಕೆ ತಂದು ನಿರಪಾಯಕಾರಿಯಾಗಿ ವಿಲೇವಾರಿ ಮಾಡುವ ಮೊದಲ ಕೆಲಸವನ್ನು ಸಮರ್ಥವಾಗಿ ನಡೆಸಿದೆ. ಈ ಮೊದಲ ಪ್ರಯತ್ನದಲ್ಲಿ 12,000 ಕಿಲೋ ಗ್ರಾಂ (12 ಟನ್) ಕಸವನ್ನು ಹೊರಕ್ಕೆ ತಂದಿದೆ.

ಈ ಕ್ರಮವನ್ನು ಮತ್ತೂ ಅಭಿವರ್ಧನೆಗೊಳಿಸಿ 2040ರ ವೇಳೆಗೆ ಇಡೀ ಕಡಲಿನಾವಾರವನ್ನು ಶೇ. 90ರಷ್ಟು ಪ್ಲಾಸ್ಟಿಕ್ ಮುಕ್ತವಾಗಿಸುವ ಭವ್ಯ ಭರವಸೆಯನ್ನು ಹೊಂದಿದೆ. ಹಾಗಾದಾಗ ಅದೊಂದು ಕಲ್ಪನಾತೀತ ಮಹಾನ್ ಸಾಧನೆಯಾಗಲಿದೆ.

■ ಎನ್. ವಾಸುದೇವ್